ದಿನಾಂಕ 04–05–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು:** 1 ನೇ ಎದುರುದಾರರ ಪರ ಶ್ರೀ ವಿ ಎಸ್ ಎನ್ . ವಕೀಲರಿಂದಃ

8. ನಾನು ಮೆಕ್ಯಾನಿಕ್ ಕೆಲಸ ಬಾಳೇಗುಳಿಯಲ್ಲಿ ಮಾಡುತ್ತಿದ್ದೇನೆ. ನಾನು ಮೆಕ್ಯಾನಿಕ್ ಅಂಗಡಿಯಲ್ಲಿ ಕೆಲಸಕ್ಕೆ ಇರುವುದು. ರಸ್ತೆ ಅಪಘಾತ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಾನು ಅಪಘಾತ ನೋಡಿಲ್ಲ ಎಂದು ನುಡಿಯುತ್ತಾರೆ. ರಜತ ನನ್ನ ಮಗ ಎಂದು ಹೇಳುವ ದಾಖಲೆ ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 1 ನೇ ಎದುರುದಾರರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

9. 1 ನೇ ಎದುರುದಾರರ ಮೋಟಾರ ಸೈಕಲ್ ಸಂಖ್ಯೆ: ಕೆ ಎ –*30* /ಯು – 0146 ಕ್ಕೆ ನಾನು ಹೇಳುವಂತಹ ಅಪಘಾತದ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿತ್ತು ಹಾಗೂ 1 ನೇ ಎದುರುದಾರರಿಗೆ ಚಾಲನ ಪರವಾನಿಗೆ ಇತ್ತು ಎಂದರೆ ಸರಿ. ಆದ್ದರಿಂದ 2 ನೇ ಎದುರದಾರರು ಪರಿಹಾರ ಕೊಡಲು ಜವಬ್ದಾರರು ಎಂದರೆ ಸರಿ .

**ಪಾಟೀ ಸವಾಲು:** 2 ನೇ ಎದುರುದಾರರ ಪರ ಶ್ರೀ ಎ. ಎನ್ . ಟಿ . ವಕೀಲರಿಂದಃ

10. ಸದ್ರಿ ರಸ್ತೆ ಅಪಘಾತವಾದ ನಂತರ 5 ದಿನ ಬಿಟ್ಟು ಪೊಲೀಸರಿಗೆ ನಾನೇ ದೂರು ಕೊಟ್ಟಿರುತ್ತೇನೆ. ಅಂಕೋಲಾದ ಸರ್ಕಾರಿ ಆಸ್ಪತ್ರೆಗೆ ನನ್ನ ಮಗನನ್ನು ಚಿಕಿತ್ಸೆಗೆ ಕೊಂಡೊಯ್ಯಲಾಯಿತು. ಸದ್ರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಅಪಘಾತದಿಂದ ಗಾಯವಾಯಿತು ಎಂದು ತಿಳಿಸಲಾಗಿದೆ. ಅಲ್ಲಿಂದ ನನ್ನ ಮಗನನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನನಗೆ ಆ ದಿನ ಪೊಲೀಸರಿಗೆ

ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾವು ಆಸ್ಪತ್ರೆಯಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ನಾನು ಅಪಘಾತ ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸದ್ರಿ ಅಪಘಾತ ವಿಚಾರವನ್ನು ಜಾವೇದ್ ಮತ್ತು ಚಂದ್ರಕಾಂತ್ ಎಂಬ ಟೈಲರ್ ರವರು ಬಂದು ಹೇಳಿದರು. ಈ ಅಪಘಾತದ ಹೇಗೆ ಆಯಿತು ಎಂದು ನನಗೆ ಮಾಹಿತಿ ಇಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ಮಗ ಸೈಕಲ್ ನಲ್ಲಿ ಸಡನ್ನಾಗಿ ರಸ್ತೆ ಮದ್ಯೆ ನುಗ್ಗಿಸಿ ಅವನ ತಪ್ಪಿನಿಂದ ಆ ಅಪಘಾತಕ್ಕೆ ಕಾರಣವಾಗಿದ್ದು ಹಾಗೂ 1 ನೇ ಎದುರುದಾರನ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಮಜಕೂರಿನ ದೂರನ್ನು ಪೊಲೀಸರಿಗೆ ಸಲ್ಲಿಸಿರುವುದರಿಂದ 1 ನೇ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಹಾಗೂ ಆದಾಗ್ಯೂ ಆತನ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ.

12. ನನ್ನ ಮಗನಿಗೆ ಎಡಗಾಲಿಗೆ ಪೆಟ್ಟು ಆಗಿ ಮೂಳೆ ಮುರಿತವಾಗಿತ್ತು. ಸಾಕ್ಷಿ ಸ್ವತಃ 2 ರಾಡ್ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಆ ರಾಡ್ ಗಳನ್ನು ಈಗ ತೆಗೆದು, ಈಗ ಆತ ಸರಿಯಾಗಿ ನಡೆಯುತ್ತಾನೆ ಎಂದರೆ ಸಾಕ್ಷಿ ರಾಡ್ ಗಳನ್ನು ತೆಗೆದಿದ್ದಾರೆ, ಆದರೆ ಆತನಿಗೆ ಈಗಲೂ ನೋವು ಆಗುತ್ತದೆ ಎಂದು ನುಡಿಯುತ್ತಾರೆ. ಶಾಲೆಗೆ ಈಗ ಹೋಗುವಾಗ ಸೈಕಲ್‌ನಲ್ಲಿ ಹೋಗುತ್ತಿದ್ದಾನೆ ಎಂದರೆ ಸರಿಯಲ್ಲ. ಆತನ ದೇಹಕ್ಕೆ ಯಾವುದೇ ತೊಂದರೆ ಇಲ್ಲ ಹಾಗೂ ಅಂಗನ್ಯೂನತೆ ಇಲ್ಲ ಎಂದರೆ ಸಾಕ್ಷಿ ದೇಹಕ್ಕೆ ತೊಂದರೆ ಆದರೆ ಕಾಲಿಗೆ ತೊಂದರೆ ಇದೆ ಎಂದು ನುಡಿಯುತ್ತಾರೆ. ನಾನು ಆತನಿಗೆ ಅಂಗನ್ಯೂನತೆ ಶೇಕಡಾ 25 ಇದೆ ಎಂದು ಬಗ್ಗೆ ತಪಾಸಣೆ ಮಾಡಿಸಿದ್ದೇನೆ. ಆದರೆ ಆ ಬಗ್ಗೆ ಪ್ರಮಾಣ ಪತ್ರ ನೀಡಿಲ್ಲ. ಆತನಿಗೆ ಶೇಕಡಾ 25 ಅಂಗನ್ಯೂನತೆ ಇದೆ ಎಂದು ನಾನು ಅಂದಾಜಿನಲ್ಲಿ ಹೇಳುತ್ತಿದ್ದೇನೆ ವಿನಃ ವೈದ್ಯರ ಪ್ರಮಾಣ ಪತ್ರ ಇಲ್ಲ ಎಂದರೆ ಸಾಕ್ಷಿ ಪ್ರಮಾಣ ಪತ್ರ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಗನಿಗೆ ಚಿಕಿತ್ಸೆ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಾಗಿ ಪಡೆದದ್ದು ಎಂದರೆ ಸಾಕ್ಷಿ ಅಲ್ಲಿ ಪಡೆದಿದ್ದರು ಕೂಡಾ

ಗುಳಿಗೆಗೆ ಖರ್ಚಾಗಿದೆ ಎಂದು ನುಡಿಯುತ್ತಾರೆ. ಷದ್ರಿ ಗುಳಿಗೆಗೆ ಖರ್ಚಾಗಿದೆ ಎಂದು ತೋರಿಸಲು ರಶೀದಿ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ರಶೀದಿ ಕಾಣೆಯಾಗಿದೆ ಎಂದು ನುಡಿಯುತ್ತಾರೆ.

13. ಅಪಘಾತದಿಂದ ಆದ ಗಾಯಕ್ಕೆ ಭವಿಷ್ಯದ ಖರ್ಚು ವೆಚ್ಚ ಇಲ್ಲ ಎಂದು ವೈದ್ಯರು ಹೇಳಿದ್ದಾರೆ ಎಂದರೆ ಸಾಕ್ಷಿ ತೊಂದರೆ ಆದರೆ ಮತ್ತೇ ಕೂಡಾ ಬರಲು ಹೇಳಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮಗ ಚಿಕ್ಕವನಿದ್ದುದರಿಂದ ಮೂಳೆ ಮುರಿತ ಕೂಡಿಕೊಂಡು ಈಗ ಯಾವುದೇ ತೊಂದರೆ ಇಲ್ಲದೇ ಇರುವುದರಿಂದ ಆತನಿಗೆ ಯಾವುದೇ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ.

14. ನನ್ನ ಮಗ ಈಗ 2 ನೇ ಪಿ ಯು ಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಆತನು ಪರೀಕ್ಷೆ ಬರೆದಿರುತ್ತಾನೆ. ಅಪಘಾತದ ಸಮಯದಲ್ಲಿ ಆತ ಎಸ್ ಎಸ್ ಎಲ್ ಸಿ ವ್ಯಾಸಾಂಗ ಮಾಡುತ್ತಿದ್ದ. ಆ ಅಪಘಾತ ವಾದ ವರ್ಷದಲ್ಲಿ ಕೂಡಾ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದು ಪಾಸಾಗಿದ್ದಾನೆ ಎಂದರೆ ಸಾಕ್ಷಿ ನಾವು ಕರೆದುಕೊಂಡು ಹೋಗಿ ಪರೀಕ್ಷೆ ಬರೆಸಿದ್ದು ಎಂದು ನುಡಿಯುತ್ತಾರೆ. ಶಾಲೆಗೆ ಹೋಗಿ ಬರುವುದು ಬಿಟ್ಟರೆ ಆತ ಆದಾಯ ಮಾಡುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಅವನ ಊಟ, ಬಟ್ಟೆ ಬರೆ ಹಾಗೂ ವಿದ್ಯಾಭ್ಯಾಸದ ಖರ್ಚು ನಾನೇ ಭರಿಸಬೇಕು ಹಾಗೂ ಈಗಲೂ ಭರಿಸುತ್ತಿದ್ದೇನೆ ಎಂದರೆ ಸರಿ. ನಾನು ಆತನಿಗೆ ರೂಪಾಯಿ 2 ಲಕ್ಷ ಔಷಧೋಪಚಾರ ಇತ್ಯಾದಿಗಳಿಗೆ ಖರ್ಚು ಮಾಡಿದ್ದೇನೆ ಎಂದು ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂ-1**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.